# ಐಕ್ಯತೆಯ ಅಂತಿಮ ಸ್ಥಾಪನೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಬೇಕಾದ ಸತ್ಯವೇದದ ವಚನಗಳು ಯೋಹಾನ** 14:1–3; **ಯೆಶಾಯ** 11:1–10; **ಪ್ರಕಟನೆಗಳು** 21:1–5; 1 **ಥೆಸ** 4:13–18; **ಪ್ರಕಟನೆಗಳು.** 22:1–5; **ಯೆಶಾಯ** 35:4–10.

**ಸ್ಮರಣವಾಕ್ಯ : "ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶ ಮಂಡಲವನ್ನು ನೂತನ ಭೂಮಂಡಲವನ್ನು ಎದುರು ನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವುದು"** 2 **ಪೇತ್ರ** 3:13.

"ತಾನು ತಿರುಗಿ ಬರುವೆನೆಂದು" ಯೇಸುವು ಮಾಡಿದ ವಾಗ್ದಾನವು ಸತ್ಯವೇದದಲ್ಲಿರುವ ವಾಗ್ದಾನಗಳಲ್ಲಿ ದೊಡ್ಡದು. ನಮ್ಮ ನಿರೀಕ್ಷೆಯು ಈ ವಾಗ್ದಾನದ ಮೇಲೆ ಕೇಂದ್ರೀಕೃತವಾಗಿರುವುದರಿಂದ ನಮಗೆ ಎಲ್ಲವೂ ಇದೇ ಆಗಿದ್ದು ಇದನ್ನು ಬಿಟ್ಟರೆ ನಮಗೆ ಬೇರೆ ಏನೂ ಇರುವುದಿಲ್ಲ. ಯೇಸುವು ಆಕಾಶದಲ್ಲಿ ಮೇಘರೂಢನಾಗಿ ಹಿಂದಿರುಗಿ ಬರುವಾಗ ಐಹಿಕವಾದವುಗಳು ಮತ್ತು ಮಾನವ ನಿರ್ಮಿತವಾದವುಗಳು ಕೇವಲ ತಾತ್ಕಾಲಿಕವಾದವುಗಳಾಗಿದ್ದು ಎಲ್ಲವೂ ಇಲ್ಲದೆ ಹೋಗುತ್ತದೆ.

ಯೇಸುವಿನೊಂದಿಗೆ ಪರಲೋಕಕ್ಕೆ ಎತ್ತಲ್ಪಟ್ಟ ಒಂದು ಸಾವಿರ ವರುಷಗಳ ತರುವಾಯ, ಯುದ್ಧಗಳು, ಕ್ಷಾಮಗಳು, ರೋಗಗಳು ಮತ್ತು ದುರಂತಗಳು ತುಂಬಿರುವ ಈ ಭೂಮಿಯು ನೂತನ (ಹೊಸತು) ಮಾಡಲ್ಪಟ್ಟು ಅಂತಿಮವಾಗಿ ವಿಮೋಚಿತರು

(ರಕ್ಷಿತರು) ಪರಸ್ಪರ ಮತ್ತು ಕ್ರಿಸ್ತನೊಂದಿಗೆ ಒಟ್ಟುಗೂಡಿ ವಾಸಿಸುವ ಸ್ಥಳವಾಗುತ್ತದೆ.

ಕ್ರಿಸ್ತನ ಎರಡನೆ ಬರುವಿಕೆಯ ನಿರೀಕ್ಷೆಯು ಹೊಸ ಒಡಂಬಡಿಕೆಯ ಪ್ರಮುಖ ವಿಚಾರವಾಗಿರುತ್ತದೆ. ಈ ವಾಗ್ದಾನದ ನೆರವೇರಿಕೆಗೆ ಕ್ರೈಸ್ತರು ಶತಶತಮಾನ– ಗಳಿಂದಲೂ ಹಂಬಲಿಸಿರುತ್ತಾರೆ. ನಮ್ಮ ಹೆಸರೇ ಹೇಳುವಂತೆ ಸೆವೆಂತ್ ಡೇ ಅಡ್ವೆಂಟಿಸ್ಟರಾದ ನಾವು ಸಹಾ ನಿರೀಕ್ಷೆಯಿಂದ ಆತನ ಬರೋಣಕ್ಕೆ ಹಂಬಲಿಸುವವರಾಗಿದ್ದೇವೆ. ಈ ವರ್ಷದ ಕಟ್ಟ ಕಡೆಯ ಈ ಪಾಠದಲ್ಲಿ ಕ್ರೈಸ್ತರ ಐಕ್ಯತೆಗೆ ನಮಗಿರುವ ವಾಗ್ದಾನವು ಸರ್ವಸ್ವವಾಗಿದೆ ಎಂಬುದನ್ನು (ಅರಿಯುತ್ತೇವೆ) ಅರಿತುಕೊಳ್ಳುತ್ತೇವೆ. ಮನುಷ್ಯರಾದ ನಮ್ಮ ದೌರ್ಬಲ್ಯಗಳು ಮತ್ತು ಪರಿಮಿತಿಗಳು ಕ್ರಿಸ್ತನಲ್ಲಿ ನಮಗಿರುವ ಏಕತೆ ಆಗಾಗ್ಗೆ ಸವಾಲನ್ನೊಡ್ಡುತ್ತವೆ. ಆದರೆ ನಮ್ಮಲ್ಲಿರುವ ಭಿನ್ನತೆಗೆ ಇನ್ನೆಂದಿಗೂ ಪರಿಹಾರವನ್ನು ಹಾರೈಸುವ ಅಗತ್ಯವಿರುವುದಿಲ್ಲ ಯಾಕೆಂದರೆ ಆತನ ಎರಡನೆಯ ಬರೋಣದಲ್ಲಿ ನಾವು ಯೇಸುಕ್ರಿಸ್ತನಲ್ಲಿ ಬಂದಾಗುತ್ತೇವೆಯೋ ಆವಾಗ ನಮ್ಮಲ್ಲಿ ಯಾವ ಭಿನ್ನತೆಯೂ ಇರುವುದಿಲ್ಲ. ಅಂತಿಮವಾಗಿ ನಾವೆಲ್ಲರೂ ಮತ್ತೆ ಒಂದುಗೂಡಿ ಒಂದು ಮರುಸ್ಥಾಪಿತ ಕುಟುಂಬವಾಗಿ ರೂಪತವಾಗುತ್ತೇವೆ.

ಡಿಸೆಂಬರ್ 29ನೇ ತಾರೀಖಿನ ಸಬ್ಬತ್ತಿಗೆ ಸಿದ್ಧತೆ ಮಾಡಿಕೊಳ್ಳಲು ಈ ಪಾಠಗಳನ್ನು ಅಧ್ಯಯನ ಮಾಡಿರಿ.

**ಭಾನುವಾರ** **ಡಿಸೆಂಬರ್, 23**

**ಯೇಸುವಿನ ಬರೋಣದ ನಿಶ್ಚಯ**

**ಯೋಹಾನ 14:1–3 ರಲ್ಲಿ ಯೇಸುವಿನ ಎರಡನೇ ಬರೋಣದ ಕುರಿತ ಪ್ರಖ್ಯಾತ ವಾಗ್ದಾನವಾಗಿದೆ. ವಿಮೋಚಿತರು ನೂತನ ಭೂಮಿಯಲ್ಲಿ ಯಾವ ತೆರನಾದ ಜೀವಿತವನ್ನು ಜೀವಿಸುತ್ತಾರೆ ಎಂಬುದರ ಬಗ್ಗೆ ಈ ವಾಗ್ದಾನವು ಏನು ಹೇಳುತ್ತದೆ?**

––––––––––––––––––––––––––––––––––––––––––––

––––––––––––––––––––––––––––––––––––––––––––

ಆದಿಕ್ರೈಸ್ತರು ಕ್ರಿಸ್ತನು ಹಿಂದಿರುಗಿ ಬರುವುದನ್ನು ಭಾಗ್ಯಕರ ನಿರೀಕ್ಷೆ ಎಂಬುದಾಗಿ ಪರಿಗಣಿಸುತ್ತಾರೆ (ತೀತ 2:13). ಆತನ ಎರಡನೇ ಬರೋಣದಲ್ಲಿ ಪರಿಶುದ್ಧ ವಾಕ್ಯದ ಪ್ರವಾದನೆಗಳು ಮತ್ತು ವಾಗ್ದಾನಗಳು ನೆರವೇರುತ್ತದೆ ಎಂಬುದಾಗಿ ನಿರೀಕ್ಷಿಸಿದರು. ಇದುವೇ ಕ್ರೈಸ್ತ ಯಾತ್ರೆಯ ಮುಖ್ಯಗುರಿಯಾಗಿದೆ.

ಕ್ರಿಸ್ತನನ್ನು ಪ್ರೀತಿಸುವವರೆಲ್ಲರೂ ಅವನೊಂದಿಗೆ ಮುಖಾಮುಖಿ ಅನ್ಯೋನ್ಯತೆಯಲ್ಲಿ ಪಾಲನ್ನು ಹೊಂದುದ ದಿನಕ್ಕಾಗಿ ಎದುರು ನೋಡುತ್ತಾರೆ. ಆತನ

ಮಾತು ಈ ವಚನಗಳಲ್ಲಿ ನಾವು ಪಾಲುಗಾರಿಕೆ ಹೊಂದುವ ನಿಕಟತೆ ಮತ್ತು ಆಪ್ತತೆಯನ್ನು ಸೂಚಿಸುತ್ತದೆ. ಈ ಪಾಲುಗಾರಿಕೆ ಅವನೊಂದಿಗೆ ಪಾಲುಗಾರಿಕೆಯನ್ನು ಹೊಂದುವುದಲ್ಲದೆ ನಾವೆಲ್ಲರೂ ಅದರಲ್ಲಿ ಪರಸ್ಪರ ಪಾಲು ಹೊಂದುತ್ತೇವೆ.

ಕ್ರೈಸ್ತರು ಈ ವಾಗ್ದಾನದಲ್ಲಿ ನಂಬಿಕೆ ಇಡುತ್ತಾರೆ ಯಾಕೆಂದರೆ ಸತ್ಯವೇದವು ಇದರ ನೆರವೇರಿಕೆಯನ್ನು ಖಾತ್ರಿಪಡಿಸುತ್ತದೆ. ನಮ್ಮ ಈ ಭರವಸೆ ಯಾಕೆಂದರೆ ನಾವೆಲ್ಲರೂ ಕ್ರಿಸ್ತನು "ನಾನು ತಿರುಗಿ ಬರುತ್ತೇನೆ" ಎಂದು ಹೇಳಿರುವ ಮಾತನ್ನು ನಂಬುತ್ತೇವೆ (ಯೋಹಾನ 14:3) ಕ್ರಿಸ್ತನ ಮೊದಲನೆಯ ಬರೋಣವನ್ನು ಪ್ರವಾದನೆಗಳು ಹೇಳಿದಂತೆ ಎರಡನೆಯ ಬರೋಣವನ್ನೂ ಮುಂತಿಳಿಸುತ್ತದೆ (ಹಳೆಯ ಒಡಂಬಡಿಕೆಯಲ್ಲೆ) ಜಲಪ್ರಳಯಕ್ಕೆ ಮುಂಚೆಯೇ ದೇವರು ಹನೋಕನಿಗೆ ಕ್ರಿಸ್ತನ ಎರಡನೆಯ ಬರೋಣದ ಬಗ್ಗೆ ತಿಳಿಸಿದನು. ಯೂದ 14, 15.

ಯೇಸುಕ್ರಿಸ್ತನು ಈ ಭೂಮಿಗೆ ಬರುವುದಕ್ಕೆ ಸಾವಿರ ವರುಷಗಳ ಮುಂಚೆಯೇ ಅರಸನಾದ ದಾವೀದನು ಸಹ ಮೆಸ್ಸೀಯನು ತನ್ನ ಜನರನ್ನು ಕೂಡಿಸುವುದಕ್ಕಾಗಿ ಮತ್ತೆ ಬರುತ್ತಾನೆ ಎಂದು ಪ್ರವಾದಿಸಿದ್ದಾನೆ. "ನಮ್ಮ ದೇವರು ಪ್ರತ್ಯಕ್ಷನಾಗುವನು, ಎಷ್ಟು ಮಾತ್ರವೂ ಸುಮ್ಮನಿರುವುದಿಲ್ಲ; ಆತನ ಮುಂಭಾಗದಲ್ಲಿ ಬೆಂಕಿ ಪ್ರಜ್ವಲಿಸುತ್ತದೆ; ಆತನ ಸುತ್ತಲು ಬಿರುಗಾಳಿ ಬೀಸುತ್ತದೆ. ಆತನು ತನ್ನ ಪ್ರಜೆಗಳ ನ್ಯಾಯ ವಿಚಾರಣೆಯಲ್ಲಿ ಭೂಮ್ಯಾಕಾಶಗಳನ್ನು ಸಾಕ್ಷಿಗಳಾಗಿ ನೇಮಿಸುತ್ತಾನೆ. ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ ಎಂದು ಆಜ್ಞಾಪಿಸುತ್ತಾರೆ" (ಕೀರ್ತ 50:3–5).

ಕ್ರಿಸ್ತನ ಎರಡನೇ ಬರೋಣಕ್ಕೆ ಆತನ ಮೊದಲ ಆಗಮನದೊಂದಿಗೆ ಒಂದಕ್ಕೊಂದು ನಿಕಟವಾದ ಸಂಬಂಧವಿದೆ. ಮುಂತಿಳಿಸಿರುವ ಪ್ರವಾದನೆಗಳು (ಉದಾ : ಆದಿ 3:15; ಮೀಕ 5:2; ಯೆಶಾ 11:1; ದಾನಿ 9:25, 26). ಆತನ ಎರಡನೇ ಬರೋಣದ ವಾಗ್ದಾನವು ನಮ್ಮ ಭರವಸೆಗೂ ನಮ್ಮ ನಿರೀಕ್ಷೆಗೂ ಅಸ್ತಿವಾರವಾಗಿದೆ. ತನ್ನನ್ನು ತಾನೆ ಪ್ರಾಯಶ್ಚಿತ್ತ ಯಜ್ಞವಾಗಿ ಸಮರ್ಪಿಸಿಕೊಂಡು ನಮ್ಮ ಪಾಪಗಳನ್ನು ನಮ್ಮಿಂದ ತೆಗೆದು ಹಾಕಲು ಕಾಣಿಸಿಕೊಂಡನು. ಅಂದರೆ ಕ್ರಿಸ್ತನು ಅನೇಕರ ಪಾಪಗಳನ್ನು ಹೊತ್ತುಕೊಂಡು ಒಂದೇ ಸಲ ತನ್ನನ್ನು ಯಜ್ಞವಾಗಿ ಸಮರ್ಪಿಸಿಕೊಂಡನು. ತನ್ನ ಬರೋಣಕ್ಕೆ ಕಾತರದಿಂದ ಕಾಯುತ್ತಿರುವವರಿಗೆ ಆತನು ಎರಡನೆಯ ಸಲ ಕಾಣಿಸಿಕೊಳ್ಳುವನು (ಇಬ್ರಿ 9:26, 28).

**ಎರಡನೆ ಬರೋಣದ ವಾಗ್ದಾನದಿಂದ ನೀನು ಆದರಣೆಯನ್ನು ನಿರೀಕ್ಷೆಯನ್ನು ಹೊಂದುಕೊಳ್ಳುವ ಯಾವ ಮಾರ್ಗಗಳಿವೆ?**

**ಪುನರ್ ಸ್ಥಾಪನೆಯ ವಾಗ್ದಾನ**

**ಯೆಶಾಯ 11:1–10ನ್ನು ಓದಿರಿ. ಇಸ್ರಾಯೇಲಿಗೆ ಯಾವ ವಾಗ್ದಾನ ಕೊಡಲ್ಪಟ್ಟಿದೆ ಮತ್ತು ಇದು ವಿಮೋಚನೆಗೊಂಡವರು ನಿತ್ಯಕ್ಕೂ ಇರುವ ಸ್ಥಳದ ಬಗ್ಗೆ ಏನನ್ನು ಹೇಳುತ್ತದೆ?**

---

ಸತ್ಯವೇದವು ಭೂಮಿಯ ಸೃಷ್ಟಿಯ ಕಥೆಯಿಂದ ಆರಂಭವಾಗುತ್ತದೆ (ಆದಿ 1:1,2).

ನಮ್ಮ ಮೊದಲ ತಂದೆ ತಾಯಿಗೆ ದೇವರು ಬಂದು ಸುಂದರವಾದ ಮತ್ತು ಸಾಮರಸ್ಯವಿದ್ದ ಲೋಕವನ್ನು ಸೃಷ್ಟಿಸಿ ನಮ್ಮ ಮೊದಲ ತಂದೆ ತಾಯಿ– ಆದಾಮ ಮತ್ತು ಹವ್ವಳ ಜವಾಬ್ದಾರಿಗೆ ಕೊಟ್ಟ ವರ್ಣನೆ ಇದೆ. ದೇವರು ಸೃಷ್ಟಿಸಿದ ಮಾನವ ಸಂತತಿಗೆ ಇದು ಒಂದು ಪರಿಪೂರ್ಣವಾದ ಲೋಕ ಮತ್ತು ಮನೆ.

ಸತ್ಯವೇದದ ಕಡೆಯ ಎರಡು ಅಧ್ಯಾಯಗಳೂ ಸಹ ದೇವರು ವಿಮೋಚನೆಗೊಂಡ ಮಾನವನಿಗೆ ಒಂದು ಪರಿಪೂರ್ಣವಾದ, ಸಾಮರಸ್ಯವುಳ್ಳ ಲೋಕ ಸೃಷ್ಟಿಯಾಗುವ ಬಗ್ಗೆ ಹೇಳುತ್ತದೆ (ಪ್ರಕ 21:22). ಆದರೆ ಈ ಸಲ ಇದು ಇನ್ನೂ ಹೆಚ್ಚು ನಿಖರವಾಗಿರುತ್ತದೆ. ಅಂದರೆ ಪಾಪದಿಂದ ನಾಶವಾದ ಭೂಮಿಯ ಪುನರ್ ಸೃಷ್ಟಿ ಮತ್ತು ಪುನರ್ ಸ್ಥಾಪನೆ.

ರಕ್ಷಣೆ ಹೊಂದಿದವರ ನಿತ್ಯವಾದ ಮನೆಯು – ಕೇವಲ ಕಲ್ಪನೆಯಲ್ಲ, ನಿಜವಾದುದು (ವಾಸ್ತವವಾದುದು) ಎಂಬುದನ್ನು ಸತ್ಯವೇದವು ಅನೇಕ ಸ್ಥಳಗಳಲ್ಲಿ ಹೇಳುತ್ತದೆ.

ರಕ್ಷಣೆ ಹೊಂದಿದವರು ಹೊಸ ಜೀವಿತದ, ಹೊಸ ಹೊಸ ಅನುಭವಗಳನ್ನು ಪಡೆಯುತ್ತಾರೆ. ಅವರು ನೋಡುತ್ತಾರೆ, ಮೂಸುತ್ತಾರೆ, ಮುಟ್ಟುತ್ತಾರೆ ಎಲ್ಲವೂ ವಾಸ್ತವ. ಯೆಶಾಯ 11ನೇ ಅಧ್ಯಾಯದಲ್ಲಿರುವ ಪ್ರವಾದನೆಯು ಮೆಸ್ಸೀಯನ ಹೊಸ ಯುಗದ ಸೃಷ್ಟಿಯನ್ನು ಹೇಳುವ ಸುಂದರವಾದ ಪುಟದ ಭಾಗ.

ಆ ನಿತ್ಯವಾದ ಸ್ಥಳದಲ್ಲಿ ಹಿಂಸೆ ಮತ್ತು ಅನ್ಯಾಯ ಯಾವುದೂ ಇರುವುದಿಲ್ಲ. ಅವುಗಳನ್ನು ದೇವರು ತೆಗೆದು ಹಾಕಿರುತ್ತಾನೆ. ದೇವರ ಆಳ್ವಿಕೆಯು ಈ ನೂತನ ಭೂಮಿಯಲ್ಲಿ ಬಂದು ಸಾರ್ವಕಾಲಿಕ ಸಾಮರಸ್ಯವನ್ನು ಸ್ಥಾಪನೆ ಮಾಡುತ್ತದೆ.

ಪ್ರಕಟನೆ 21:1–5ನ್ನು ಓದಿರಿ.

**ಈ ಫಲಿತಾಂಶದ ದೆಸೆಯಿಂದ ಯಾವುದು ಸದಾಕಾಲಕ್ಕೂ ಇಲ್ಲದೆ ಹೋಗುತ್ತದೆ?**

–––––––––––––––––––––––––––––––––––––––––––––

–––––––––––––––––––––––––––––––––––––––––––––

ರಕ್ಷಣೆ ಪಡೆದವರಿಗೆ ಎಂತಹ ಸೌಭಾಗ್ಯ ಕಾಯುತ್ತಿದೆ ಎಂಬುದನ್ನು ವೈಟಮ್ಮನವರು ಬರೆದಿದ್ದಾರೆ.

ನಿತ್ಯತ್ವದ ವರುಷಗಳು ಉರುಳುತ್ತಿದ್ದಂತೆ ದೇವರ ಮತ್ತು ಕ್ರಿಸ್ತನ ಸಂಪದ್ಭ–ರಿತವಾದ ಮಹಿಮಾಪೂರ್ಣವಾದ ಪ್ರಕಟನೆಗಳನ್ನು ತರುತ್ತಾರೆ. ಜ್ಞಾನವು ನಿತ್ಯವೂ ಪ್ರಗತಿಯುಳ್ಳದ್ದಾಗಿರುವಂತೆ, ಪ್ರೀತಿಯು, ಭಕ್ತಿಯೂ ಮತ್ತು ಸಂತೋಷವು ಹೆಚ್ಚಾಗುತ್ತಾ ಹೋಗುತ್ತದೆ. ಮನುಷ್ಯರು ದೇವರ ಬಗ್ಗೆ ಕಲಿಯುತ್ತಾ ಹೋದಂತೆ ಆತನ ಗುಣಸ್ವಭಾವಕ್ಕೆ ತೋರಿಸುವ ಮೆಚ್ಚಿಕೆಯು ದೊಡ್ಡದಾಗಿರುತ್ತದೆ. "ಸೈತಾನನೊಂದಿಗೆ ಮಹಾ ಹೋರಾಟದಲ್ಲಿ ಪಡೆದ ಆಶ್ಚರ್ಯಕರವಾದ ಸಾಧನೆಗಳನ್ನು ಮತ್ತು ವಿಮೋಚನೆಯ ಸಂಪತ್ತನ್ನು ಕ್ರಿಸ್ತನು ಅವರ ಮುಂದೆ ತೆರೆಯುತ್ತಿದ್ದಂತೆ ಅವರ ಹೃದಯಗಳು ಬಲವಾದ ಭಕ್ತಿಯಿಂದ ಬಡಿದುಕೊಳ್ಳ ತೊಡಗುತ್ತದೆ. ಆವಾಗ ಅವರೆಲ್ಲರು ತಮ್ಮ ದೃಢವಾದ ಕೈಗಳಿಂದ ಸ್ವರ ಮಂಡಲ ಕಿನ್ನರಿಯನ್ನು ನುಡಿಸತೊಡಗುತ್ತಾರೆ. ಅದಕ್ಕೆ ಕೋಟ್ಯಾನುಕೋಟಿ ಸ್ವರಗಳು ಬೆರೆತು ಕೊಂಡಾಟವು ಹೆಚ್ಚುತ್ತಾ ಹೋಗುತ್ತದೆ".

ಇ.ಜಿ. ವೈಟ್ "ವಿಮೋಚನೆಯ ಚರಿತ್ರೆ" ಪುಟ 432, 433.

**ಈವಾಗಲಾದರೂ ಸರಿಯೆ ದೇವರ ಸ್ವಭಾವವನ್ನು ಅರ್ಥಮಾಡಿಕೊಳ್ಳುವಂತಹ ವಿಧಾನಗಳಾವುವು? ಇತರರೊಂದಿಗೆ ಸಾಮರಸ್ಯದಿಂದಲೂ ಐಕ್ಯತೆಯಿಂದಲೂ ಜೀವಿಸುವಾಗ ದೇವರ ಗುಣಸ್ವಭಾವದ ಬಗ್ಗೆ ಪ್ರಕಟ ಪಡಿಸುತ್ತದೆ ಹೇಗೆ?**

**ಮಂಗಳವಾರ** **ಡಿಸೆಂಬರ್**, 25

## ಪುನರುತ್ಥಾನ ಮತ್ತು ಪುನರ್‌ಸ್ಥಾಪಿತ ಸಂಬಂಧ

ಸಭೆಯ ಆರಂಭಿಕ ದಿನಗಳಿಂದಲೂ ನಂಬಿಗಸ್ತ ಜನರು, ಪರಿಶೋಧನೆ– ಗಳಲ್ಲಿರುವಾಗ ನಮ್ಮ ಹೃದಯಗಳನ್ನು ಬಲಪಡಿಸುವುದು ಬೇರೆ ಯಾವುದೂ ಅಲ್ಲ. ಆತನು ಹಿಂದಿರುಗಿ ಬರುವ ವಾಗ್ದಾನವು ಅವರ ಹೋರಾಟಗಳು ಎಷ್ಟೇ ಭಯಂಕರವಾಗಿರಲಿ, ಅವರ ದುಃಖ ಸಂಕಟಗಳು ಯಾವುದೇ ಇರಲಿ, ಅವರಲ್ಲಿ ಯೇಸುಕ್ರಿಸ್ತನು ತಿರುಗಿ ಬರುತ್ತೇನೆಂದು ಹೇಳಿದ ವಾಗ್ದಾನದ ಮೇಲೆ ಅವರು ನಿರೀಕ್ಷೆ ಇಟ್ಟಿದ್ದರು.

**1 ಥೆಸ 4:13–18 ಯಾವ ವಾಗ್ದಾನಗಳು ಇಲ್ಲಿ ಸೇರಿವೆ? ಅವರ ಪುನರ್ ಸ್ಥಾಪನೆಯಾದ ಬಾಂಧವ್ಯದ ನಿರೀಕ್ಷೆಯ ಬಗ್ಗೆ ಇದು ಏನನ್ನು ಹೇಳುತ್ತದೆ?**

––––––––––––––––––––––––––––––––––––––––––––––––

––––––––––––––––––––––––––––––––––––––––––––––––

––––––––––––––––––––––––––––––––––––––––––––––––

ಕ್ರಿಸ್ತನ ಆಗಮನವು ಸಮಸ್ತ ಮಾನವತೆಯ ಮೇಲೆ ಅಗಾಧವಾದ ರೀತಿಯಲ್ಲಿ ಪರಿಣಾಮ ಬೀರುತ್ತದೆ. ಬಹಳ ಮುಖ್ಯವಾದ ದೇವರಾಜ್ಯವನ್ನು ಸ್ಥಾಪನೆ ಮಾಡುವುದರ ಮುಖ್ಯ ಉದ್ದೇಶ ಯಾವುದೆಂದರೆ ಆಯಲ್ಪಟ್ಟವರನ್ನು ಒಟ್ಟಾಗಿ ಸೇ–ರಿಸುವುದು, ಆತನು ತನ್ನ ದೂತರನ್ನು ತುತ್ತೂರಿಯ ದೊಡ್ಡ ಶಬ್ದದಿಂದ ಬಂದು, ಆಯಲ್ಪಟ್ಟವರನ್ನು ನಾಲ್ಕು ದಿಕ್ಕುಗಳಿಂದ ಮತ್ತಾಯ 24:31.

ಆಯಲ್ಪಟ್ಟವರನ್ನು ಒಟ್ಟಾಗಿ ಕೂಡಿಸುವಾಗ ನೀತಿವಂತರಾಗಿ ಸತ್ತವರಿಗೆ ಪುನರುತ್ಥಾನವಾಗುವುದು ಮತ್ತು ಅವರು ಅಮರತ್ವವನ್ನು ಧರಿಸಿಕೊಳ್ಳುವರು (1 ಕೊರಿಂಥ 15:52, 53).

ಯೇಸುಕ್ರಿಸ್ತನಲ್ಲಿ ಸತ್ತೆ ನೀತಿವಂತರು ಮೊದಲು ಎದ್ದು ಬರುವರು (1 ಥೆಸ 4:16). ಈ ಕ್ಷಣಕ್ಕಾಗಿಯೇ ನಾವೆಲ್ಲರೂ ಕಾಯುತ್ತಾ ಇದ್ದೇವೆ. ಪುನರುತ್ಥಾನ ಆದವರು ತಮಗಾಗಿ ಮತ್ತು ಪ್ರೀತಿಗಾಗಿ ಹಂಬಲಿಸುತ್ತಿರುವವರ ಒಟ್ಟಿಗೆ ಒಂದಾಗಿ ಸೇರುತ್ತಾರೆ. ಇದರಲ್ಲಿ ತಾನೆ ಪೌಲನು ಸಂತೋಷಿಸುವುದು. ಮರಣವು ನುಂಗಿಯೇ ಹೋಯಿತು. ಜಯವಾಯಿತು ಎಂಬುದೇ. ಮರಣವೇ ನಿನ್ನ ಜಯವೆಲ್ಲಿ? ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ? (1 ಕೊರಿಂಥ 15:55).

ಪುನರುತ್ಥಾನವಾದಾಗ ನಮ್ಮ ಪಾಪದ ದೆಸೆಯಿಂದ ಕೊಳೆಯುವ ದೇಹ, ರೋಗ–ರುಜಿನಗಳಿಂದ, ವಯಸ್ಸಾದ, ವಿರೂಪದಿಂದಿರುವ ದೇಹ ನಾಶವಾಗಿ ಹೋಗುತ್ತದೆ. ಆವಾಗ ನಮ್ಮ ದೇಹವು ಅಮರತ್ವವನ್ನು ನಿರ್ಲಯತ್ವವನ್ನು ಧ–ರಿಸಿಕೊಳ್ಳುತ್ತದೆ.

ಪುನರುತ್ಥಾನವಾದ ಭಕ್ತರು ಯೇಸುಕ್ರಿಸ್ತನ ಮರುಸೃಷ್ಟಿಯ ಕೆಲಸದಲ್ಲಿ ಪರಿಪೂರ್ನತೆಯ ಅನುಭವವನ್ನು ಪಡೆಯುತ್ತಾರೆ. ಆರಂಭದಲ್ಲಿದ್ದ ದೇವರ ಪರಿಪೂರ್ಣವಾದ ಸ್ವರೂಪವನ್ನು ಪ್ರತಿಬಿಂಬಿಸುತ್ತಾರೆ (ಆದಿ 1:26, 1 ಕೊರಿಂಥ 15:46–49).

ಆ ಸಂದರ್ಭದಲ್ಲಿ ......... 1 ಕೊರಿಂಥ 15:53 ಪುನರುತ್ಥಾನ ಹೊಂದಿದವರಲ್ಲಿ ಎರಡು ಗುಂಪಿನವರು ಇರುತ್ತಾರೆ.

**ಈ ವಿಜ್ಞಾನ ಯುಗದಲ್ಲಿ ಕೆಲವು ಕ್ರೈಸ್ತರು ಪ್ರತಿಯೊಂದಕ್ಕೂ ಅದ್ಭುತಗಳಿಗೂ ಸ್ವಾಭಾವಿಕ ವಿವರಣೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಪುನರುತ್ಥಾನದ ವಾಗ್ದಾನವು ದೇವರ ಅದ್ಭುತವಾದ ಕಾರ್ಯಗಳಿಂದ ಮಾತ್ರ ನಾವು ರಕ್ಷಣೆ ಹೊಂದುತ್ತೇವೆ ಎಂಬುದರ ಬಗ್ಗೆ ಪುನರುತ್ಥಾನದ ವಾಗ್ದಾನವು ನಮಗೆ ಏನನ್ನು ಬೋಧಿಸುತ್ತದೆ?**

**ಬುಧವಾರ** **ಡಿಸೆಂಬರ್ 26**

**ವಿಮೋಚಿತರಿಗಾಗಿ ಒಂದು ನೂತನ ಭೂಮಿ**

ಇಗೋ ನೂತನ ಆಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಸೃಷ್ಟಿಸುವೆನು. ಮೊದಲಿದ್ದದ್ದನ್ನು ಯಾರೂ ನೆನಸಿಕೊಳ್ಳರು ಅದು ನೆನಪಿಗೆ ಬಾರದು (ಯೆಶಾಯ 65:17).

ಯೆಶಾಯ ಮತ್ತು ಯೋಹಾನ (ಪ್ರಕಟನೆ 21:1). ಇಬ್ಬರೂ ವಾಗ್ದಾನದತ್ತ ನೂತನ ಭೂಮಿಯನ್ನು ತಮ್ಮ ದರ್ಶನಗಳಲ್ಲಿ ನೋಡಿದರು.

**ಪ್ರಕಟನೆ ಪುಸ್ತಕದಲ್ಲಿ ಯೋಹಾನನ ಊಹೆಗೂ ನಿಲುಕದಿರುವ ನಗರ ನೂತನ ಯೆರೂಸಲೇಮಿನ ವಿವರಣೆಯನ್ನು ಪರಿಗಣಿಸಿದರೆ (ಪ್ರ 21:2, 9:27) ಆ ನಗರದಲ್ಲಿ ಅಸ್ತಿತ್ವದಲ್ಲಿರುವ ಐಕ್ಯತೆ ಮತ್ತು ಸಾಮರಸ್ಯಗಳ ಈ ವಚನಗಳು ಏನನ್ನು ಸೂಚಿಸುತ್ತವೆ?**

____________________________________________

____________________________________________

____________________________________________

ಪ್ರಕಟನೆ 22:1–5ನ್ನು ಓದಿರಿ.

**ದೇವರ ಸಿಂಹಾಸನದಿಂದ ಹರಿದು ಬರುತ್ತಿರುವ ಜೀವನದಿ ಮತ್ತು ಹರಡಿರುವ ಜೀವ ವೃಕ್ಷ ಈ ಎರಡು ಮುಖ್ಯಲಕ್ಷಣಗಳು ಹೊಸನಗರದಲ್ಲಿವೆ. ನೂತನ ಭೂಮಿಯಲ್ಲಿ ಇವುಗಳು ಇರುವ ಉದ್ದೇಶವೇನು?**

____________________________________________

____________________________________________

____________________________________________

ತನ್ನ ಉಲ್ಲಂಘನೆಯಿಂದ ಜೀವವೃಕ್ಷದ ಬಳಿಗೆ ಹೋಗುವ ಹಕ್ಕನ್ನು ಆದಮನು

ಕಳೆದುಕೊಂಡನು (ಆದಿ 3:22). ಇದನ್ನು ಕ್ರಿಸ್ತನು ಹೊಸ ಯೆರೂಸಲೇಮ್‌ನಲ್ಲಿ ಅವನಿಗೆ ತಿರುಗಿ ಕೊಡುತ್ತಾನೆ (ಪ್ರಕ 2:7). ಈ ಜೀವವೃಕ್ಷವು ಹನ್ನೆರಡು ತಿಂಗಳುಗಳಲ್ಲಿ ಹನ್ನೆರಡು ವಿಧದ ಫಲಗಳನ್ನು ಕೊಡುತ್ತದೆ. ಅದು ಯಾತಕ್ಕೆಂದು ಯೆಶಾಯ 66:25 ರಲ್ಲಿ ತಿಳಿದುಕೊಳ್ಳುತ್ತೇವೆ.

ಯೆಶಾಯ 66:23– "ಪ್ರತಿಯೊಂದು ಅಮಾವಾಸ್ಯೆಯಲ್ಲಿಯೂ ಒಂದೊಂದು ಸಬ್ಬತ್ ದಿನದಲ್ಲಿಯೂ ಸಕಲ ನರಜನ್ಮದವರೂ ನನ್ನ ಸನ್ನಿಧಿಯಲ್ಲಿ ಎರಗುವುದಕ್ಕೆ ಬರುವರು; ಇದು ಯೆಹೋವನ ನುಡಿ".

'ಜನಾಂಗಗಳನ್ನು ವಾಸಿ ಮಾಡುವುದಕ್ಕೆ' ಎಂಬ ಉಲ್ಲೇಖವು ಜನಗಳ ಮಧ್ಯೆ ಇರುವ ತಾರತಮ್ಯಗಳನ್ನು ತೆಗೆದು ಹಾಕುತ್ತದೆ. ಮಾನವತೆಯನ್ನು ಮರುಸ್ಥಾಪಿಸುವ ಉದ್ದೇಶಕ್ಕೆ ಒತ್ತುಕೊಡುತ್ತದೆ. ಅಂದರೆ ಎಲ್ಲಾ ಜನಗಳನ್ನು ಒಂದು ಅವಿಭಾಜಿತ ದೊಡ್ಡ ಕುಟುಂಬವಾಗಿ ಮಾಡಿ ಅವರೆಲ್ಲ ಐಕ್ಯತೆಯಿಂದ, ಸಮಾಧಾನದಿಂದ ಸಾಮರಸ್ಯದಲ್ಲಿ ಜೀವಿಸುತ್ತಾ ದೇವರಿಗೆ ಮಹಿಮೆ ಕೊಡುವುದು.

ಜನಾಂಗಗಳನ್ನು ವಾಸಿ ಮಾಡುವುದು ಎಂಬುದು ಅಲಂಕಾರಿಕವಾಗಿ ಜನರ ಮಧ್ಯೆ ಇರುವ ಎಲ್ಲಾ ರಾಷ್ಟ್ರೀಯ, ಭಾಶಾವಾರು ತಡೆಗಳು ಮತ್ತು ಪ್ರತ್ಯೇಕ ಎಲ್ಲವನ್ನು ತೆಗೆದು ಹಾಕುವುದಕ್ಕೆ ಸೂಚಿತವಾಗಿದೆ. ಜೀವವೃಕ್ಷದ ಎಲೆಗಳು ಜನಾಂಗಗಳ ಮಧ್ಯೆ ಇರುವ ಒಡಕುಗಳನ್ನು ತೆಗೆದುಹಾಕುವುದು.

ಜನಾಂಗಗಳು ಇನ್ನೆಂದಿಗೂ ಅನ್ಯಜನಾಂಗಗಳು ಎನಿಸಿಕೊಳ್ಳುವುದಿಲ್ಲ. ಆದರೆ ಅವರು ಸತ್ಯದೇವರ ಮಕ್ಕಳಾಗಿ ಒಂದೇ ಕುಟುಂಬವಾಗಿ ಒಂದಾಗುತ್ತಾರೆ (ಹೋಲಿಸಿ) ಪ್ರ 21:24–26.

ಮೀಕನು ಶತಮಾನಗಳ ಹಿಂದೆ ಏನನ್ನು ನಿರೀಕ್ಷಿಸಿದ್ದನೋ ಅದು ಈವಾಗ ನೆರವೇರುತ್ತಾ ಇದೆ.

ಮೀಕ 4:3–4 "ಆತನು ಬಹುರಾಷ್ಟ್ರದವರ ವಾಜ್ಯಗಳನ್ನು ವಿಚಾರಿಸುವನು, ಪ್ರಬಲ ಜನಾಂಗಗಳಿಗೆ ನ್ಯಾಯತೀರಿಸುವನು; ಅವರೋ ತಮ್ಮ ಕತ್ತಿಗಳನ್ನು ಕುಲುಮೆಗೆ ಹಾಕಿ ಗುಳಗಳನ್ನಾಗಿಯೂ ಬರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು; ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು, ಇನ್ನು ಯುದ್ಧಾಭ್ಯಾಸವು ನಡೆಯುವುದೇ ಇಲ್ಲ. ಒಬ್ಬೊಬ್ಬನು ತನ್ನ ತನ್ನ ದಾಕ್ಷಾಲತೆ, ಅಂಜುರಗಿಡ, ಇವುಗಳ ನೆರಳಿನಲ್ಲಿ ಕೂತುಕೊಳ್ಳುವನು; ಅವರನ್ನು ಯಾರೂ ಹೆದರಿಸರು; ಸೇನಾಧೀಶ್ವರನಾದ ಯೆಹೋವನ ಬಾಯೇ ಇದನ್ನು ನಡೆದಿದೆ. ಯೆಶಾಯ 2:4– "ಆತನು ದೇಶಗಳ ವ್ಯಾಜ್ಯಗಳನ್ನು ವಿಚಾರಿಸುವನು, ಬಹು ರಾಷ್ಟ್ರದವರಿಗೆ ನ್ಯಾಯತೀರಿಸುವನು; ಅವರೋ ತಮ್ಮ (ಆಯುಧಗಳನ್ನು) ಕುಲುಮೆಗೆ ಹಾಕಿ ಕತ್ತಿಗಳನ್ನು ಗುಳಗಳನ್ನಾಗಿಯೂ

ಬರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು; ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು, ಇನ್ನು ಯುದ್ಧಾಭ್ಯಾಸವು ನಡೆಯುವುದೇ ಇಲ್ಲ" (ಮೀಕ 4:3–4 ಹೋಲಿಸಿ ಯೆಶಾ 2:4).

ಜೀವನದಿಯ ದಡಗಳಲ್ಲಿ ವಿಮೋಚನೆ ಹೊಂದಿದವರು ತಮ್ಮ ನೆರೆಯವನನ್ನು ಜೀವವೃಕ್ಷದ ಅಡಿಯಲ್ಲಿ ಒಟ್ಟಿಗೆ ಕೂತುಕೊಳ್ಳುವುದಕ್ಕೆ ಆಹ್ವಾನಿಸುವರು.

ಜೀವವೃಕ್ಷದ ವಾಸಿಮಾಡುವ ಗುಣವಿರುವ ಎಲೆಗಳು ಯುಗಯುಗಳಿಂದ ಮಾನವರನ್ನು ಹರಿದು ವಿಭಾಗಿಸಿರುವ ಜನಾಂಗೀಯ, ವರ್ಣನೀಯ ಕುಲಗಳ ಅಥ–ವಾ ಭಾಷೀಯ ಗಾಯಗಳನ್ನು ವಾಸಿಮಾಡುತ್ತದೆ. Ranko Stefanovive, revelation of Jesus Christ. Commentary on the book of Revelation. P 592.

**ಗುರುವಾರ** **ಡಿಸೆಂಬರ್** 27

**ನೂತನ ಭೂಮಿಯ ಮೇಲಿನ ಜೀವಿತ**

**ಅಸೀಕಸಲ ಯೆಶಾಯನ ಪುಸ್ತಕದಲ್ಲಿ ಏನೋ ಒಂದು ಹೊಸದು ಎಂಬುದನ್ನು ಓದುತ್ತೇವೆ ಹೊಸ ವಸ್ತುಗಳು (ಯೆಶಾಯ** 42:9, 48,6).

––––––––––––––––––––––––––––––––––––––––––––

––––––––––––––––––––––––––––––––––––––––––––

ಒಂದು ಹೊಸಹಾಡು (ಯೆಶಾಯ 42:10), ಒಂದು ಹೊಸವಸ್ತು (ಯೆಶಾ 43:9) ಒಂದು ಹೊಸ ಹೆಸರು (ಯೆಶಾಯ 62:2) ಯೆಶಾಯ 65ನೇ ಅಧ್ಯಾಯ ಯಾವುದನ್ನು ಹೊಸದು ಎನ್ನುತ್ತದೆ ಅದು ವಸ್ತುಗಳ ಒಂದು ಹೊಸ ಕ್ರಮ. ದೇವರ ಸೃಷ್ಟಿಯಲ್ಲಿ ಎಲ್ಲಾ ಜೀವಿಗಳ ನಡುತೆ ಶಾಂತಿ ಮತ್ತು ಸಾಮರಸ್ಯವಿರುತ್ತದೆ. ಅವಿಧೇಯತೆಯಿಂದಲೂ ವಿರೋಧತೆಯಿಂದಲೂ ಭೂಮಿಯ ಮೇಲೆ ಶಾಪವನ್ನುಂಟು ಮಾಡಿದ ಒಡಂಬಡಿಕೆಗಳು ಶಾಶ್ವತವಾಗಿ ರದ್ದಾಗುತ್ತವೆ. ಆವಾಗ ಪಾಪವೆಂಬುದು ಎಂದಿಗೂ ಇರುವುದಿಲ್ಲ ಬದಲಾಗಿ ಅಲ್ಲಿ ಹೇರಳವಾದ ಆಶೀರ್ವಾದಗಳು ಇರುವುದಕ್ಕೆ ಮರಗಳು ಮತ್ತು ಸಂತೋಷಿಸಲು ಆಹಾರವಿರುತ್ತದೆ. ಅಂತಹಾ ಸುಂದರವಾದ ಸ್ಥಳದಲ್ಲಿ ನಮ್ಮ ಜೀವನವು ಯಾವ ರೀತಿ ಇರುತ್ತದೆ? ನಮ್ಮ ಶರೀರಗಳು ಅಮರತ್ವವನ್ನು ಪಡೆದು ನಾವು ದೇವರ ಸ್ವರೂಪಕ್ಕೆ ಸಂಪೂರ್ಣವಾಗಿ ಹಿಂದಿರುಗುತ್ತೇವೆ. ಆವಾಗ ನಾವು ನಮ್ಮ ವರನ್ನು ಗುರುತು ಹಿಡಿದಾಗ ಅವ–ರಿಗೆ ಆಶ್ಚರ್ಯವಾಗುತ್ತದೆ. ಯೇಸುಪುನರುತ್ಥಾನವಾದಾಗ ಆತನ ಶಿಷ್ಯರು ಅವನನ್ನು

ಗುರುತು ಹಿಡಿದರು. ಕೆಲವರು ಅವನ ಸ್ವರವನ್ನು ಗುರುತು ಹಿಡಿದರು (ಯೋಹಾನ 20:11–16). ತೋಮನು ಯೇಸುವಿನ ಶಾರೀ-ರಿಕ ರೂಪವನ್ನು ಗುರುತು ಹಿಡಿದನು (ಯೋಹಾನ 20:27–28) ಎಮ್ಮಾಹುವಿನಲ್ಲಿ ಇಬ್ಬರು ಶಿಷ್ಯರು ಆತನ ವರ್ತನೆ (ಹಾವಭಾವ) ಯನ್ನು ಕಂಡುಹಿಡಿದರು ಊಟದ ಮೇಜಿನಲ್ಲಿ ಗುರುತುಹಿಡಿದರು (ಲೂಕ 24:30,31). ನಮ್ಮ ಶರೀರಗಳು ಯೇಸುಕ್ರಿಸ್ತನ ಪುನರುತ್ಥಾನದ ಶರೀರಗಳಂತಾದರೆ ನಾವು ಸಹಾ ಖಂಡಿತವಾಗಿಯೂ ಒಬ್ಬರಿಗೊಬ್ಬರು ಗುರುತು ಹಿಡಿದುಕೊಳ್ಳಬಹುದು. ನಾವು ಸ್ಥಾಪನೆಗೊಂಡ ನಿತ್ಯಸಂಬಂಧಕ್ಕಾಗಿ ಎದುರು ನೋಡಬಹುದು. ಅಲ್ಲಿ ನಮ್ಮೊಂದಿಗಿರುವವರ ನಮ್ಮನ್ನು ಪ್ರೀತಿಸುವರ ಸಂಬಂಧದಲ್ಲಿ ಮುಂದುವರೆಯುತ್ತೇವೆ ಎಂದು ಸರಕ್ಷಿತವಾಗಿ ಊಹಿಸಿಕೊಳ್ಳಬಹುದು.

ಮೊದಲೇ ಪರಿಚಯವಿದ್ದ ಹಾಗೆ ವಿಮೋಚನೆಯಾದವರೆಲ್ಲ ಅಲ್ಲಿ ಪರಿಚಿತರಾಗುತ್ತಾರೆ. ದೇವರು ಅವರ ಹೃದಯಗಳಲ್ಲಿ ಪ್ರೀತಿ ಮತ್ತು ಅನುಕಂಪವನ್ನು ನೆಡುತ್ತಾನೆ. ಆ ಹೃದಯಗಳು ನಿಜವಾದ ಸಿಹಿಯಾದ ವ್ಯಾಯಾಮಗಳನ್ನು ಕಂಡುಕೊಳ್ಳುತ್ತವೆ.

ಪರಿಶುದ್ಧ ಜೀವಿಗಳೊಂದಿಗೆ ಪರಿಶುದ್ಧತೆಯ ಒಡನಾಟ, ತಮ್ಮ ವಸ್ತ್ರಗಳನ್ನು ತೊಳಕೊಂಡು ಅವುಗಳನ್ನು ಯಜ್ಞದ ಕುರಿಯಾದಾತನ ರಕ್ತದಲ್ಲಿ ಬೆಳ್ಳಗಾಗಿಸಿಕೊಂಡ ಎಲ್ಲಾ ಯುಗಗಳ ನಂಬಿಗಸ್ತರೊಂದಿಗೆ ಸಾಮರಸ್ಯದ ಸಾಮಾಜಿಕ ಜೀವನ, ಭೂಮ್ಯಾಕಾಶದಲ್ಲಿರುವ ಇಡೀ ಕುಟುಂಬವನ್ನು ಬೆಸೆಯುವ ಪವಿತ್ರ ಬಂಧನಗಳು ಎಫೆಸ 3:15 ಇವೆಲ್ಲವೂ ವಿಮೋಚಿತರಿಗೆ ಸಂತೋಷ ನೀಡಲು ಸಹಾಯ ಮಾಡುತ್ತವೆ. ಇ.ಜಿ. ವೈಟ್ ಮಹಾಹೋರಾಟ, ಪುಟ 677.

**ಆದುದರಿಂದ ನಾವು ಧೈರ್ಯಗೆಡುವುದಿಲ್ಲ. ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಅಂತರ್ಯವು ದಿನೇ ದಿನೇ ಹೊಸದಾಗುತ್ತಾ ಬರುತ್ತದೆ. ಹೇಗೆಂದರೆ ಕ್ಷಣ ಮಾತ್ರವಿರುವ ನಮ್ಮ ಹಗುರ್ವಾದ ಅತ್ಯಂತಾಧಿಕಾದ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ. ನಾವು ಕಾಣುವಂಥದ್ದನ್ನು ಲಕ್ಷಿಸದೆ ಕಾಣದಿರುವಂಥದ್ದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದ್ದು ಸ್ವಲ್ಪ ಕಾಲ ಮಾತ್ರವಿರುವುದು ಕಾಣದಿರುವಂಥದ್ದು ಸದಾಕಾಲವೂ ಇರುವುದು. 2 ಕೊರಿಂಥ 4:16–18.**

**ಹೇಗೆ ನಾವು ಈ ನಶ್ವರವಾದ, ಕ್ಷಣಿಕವಾದ ಲೋಕದಲ್ಲಿದ್ದುಕೊಂಡು ಶಾಶ್ವತವಾದ, ಕಣ್ಣಿಗೆ ಕಾಣದ ಲೋಕವನ್ನು ಗ್ರಹಿಸಿಕೊಳ್ಳುತ್ತೇವೆ ಹಾಗು ತಲುಪುತ್ತೇವೆ?**

**ಹೆಚ್ಚಿನ ಚಿಂತನೆ** : E.G. White, "Be hold I come quickly" PP 335-359 Counsels for the Church **ಎಂಬ ಪುಸ್ತಕದ 'ಪುನರುತ್ಥಾನ' ಎಂಬ ಅಧ್ಯಾಯವನ್ನು ಓದಿರಿ. ಪುಟ 1082–1084.** Heaven and New Earth **ಪುಟ 863, 864 ಇವುಗಳನ್ನು ಓದಿರಿ.**

ಇ.ಜಿ. ವೈಟ್‌ರವರ ವಿಶ್ವಕೋಶದಿಂದ ತೆಗೆದಭಾಗ : ಯೇಸುಕ್ರಿಸ್ತನ ಪುನರುತ್ಥಾನ ಮತ್ತು ಆರೋಹಣವು ದೇವಜನರ ಮರಣ ಮತ್ತು ಸಮಾಧಿಯನ್ನು ಜೈಸುತ್ತಾರೆ ಎಂಬುದಕ್ಕೆ ಖಚಿತ ಸಾಕ್ಷಿಯಾಗಿದೆ ಮತ್ತು ತಮ್ಮ ಗುಣಸ್ವಭಾವದಿಂದ ವಸ್ತುವನ್ನು ತೊಳೆದುಕೊಂಡು ಯಜ್ಞದ ಕುರಿಯಾದಾತನ ರಕ್ತದಿಂದ ಬೆಳಗ್ಗೆ ಮಾಡಿಕೊಂಡವರಿಗೆ ಆಕಾಶವು ತೆರೆದಿರುತ್ತದೆ ಎಂಬುದಕ್ಕೆ ಪ್ರಮಾಣ ವಚನವಾಗಿದೆ. ಯೇಸುಕ್ರಿಸ್ತನು ಮಾನವ ಜನಾಂಗದ ಪ್ರತಿನಿಧಿಯಾಗಿ ಪರಲೋಕಕ್ಕೆ ಏರಿಹೋಗಿದ್ದಾನೆ ಮತ್ತು ದೇವರು ತನ್ನ ಸ್ವರೂಪವನ್ನು ಪ್ರತಿಫಲಿಸುವವರನ್ನು ತನ್ನ ಮಹಿಮೆಯನ್ನು ಕಾಣುವಂತೆ ಮತ್ತು ಆ ಮಹಿಮೆಯಲ್ಲಿ ಪಾಲು ಹೊಂದುವಂತೆಯೂ ಮಾಡುತ್ತಾನೆ.

ಭೂಲೋಕದ ಯಾತ್ರಿಕರಿಗೆ ಅಲ್ಲಿ ಬಿಡಾರಗಳಿರುತ್ತವೆ ನೀತಿವಂತರಿಗೆ ಮಹಿಮೆಯ ಕಿರೀಟ, ವಿಜಯದ ವಸ್ತ್ರಗಳಿರುತ್ತವೆ. ದೈವತ್ವದ ಬಗ್ಗೆ ನಮಗಿರುವ ಗೊಂದಲವೆಲ್ಲವೂ ಸರಳವಾಗುತ್ತದೆ. ಅರ್ಥಮಾಡಿಕೊಳ್ಳುವುದಕ್ಕೆ ಕಠಿಣವಾದ ವಿಷಯಗಳಿಗೆಲ್ಲಾ ವಿವರಣೆ ಸಿಗುತ್ತದೆ. ಕೃಪೆಯ ಮರ್ಮಗಳು ನಮ್ಮ ಮುಂದೆ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಇಲ್ಲಿ ನಮ್ಮ ಅಲ್ಪಜ್ಞಾನವು ಬರೀ ಗಲಿಬಿಲಿ ಮತ್ತು ಅಪೂರ್ಣವಾದ ವಾಗ್ದಾನಗಳನ್ನು ಕಂಡುಕೊಂಡಿರುತ್ತದೆ.

ನಾವು ಅಲ್ಲಿ ಅತ್ಯಂತ ಪರಿಪೂರ್ಣವಾದ ಸುಂದರವಾದ ಸಾಮರಸ್ಯವನ್ನು ಕಾಣುತ್ತೇವೆ. ಅಪರಿಮಿತವಾದ ಪ್ರೀತಿಯು ನಮ್ಮ ಕಷ್ಟಾನುಭವಗಳನ್ನು ಕ್ರಮಪಡಿಸುತ್ತದೆ. ನಮ್ಮ ಒಳ್ಳೆಯದಕ್ಕೆ ಎಲ್ಲವೂ ಒಟ್ಟಾಗಿ ಕೆಲಸ ಮಾಡುವಂತೆ ಮಾಡುವಾತನ ಕೋಮಲತೆಯನ್ನು ಅರ್ಥಮಾಡಿಕೊಳ್ಳುತ್ತೇವೆ. ನಾವು ಅನಿರ್ವಚನೀಯ (ಹೇಳಲಾಗದ) ಆನಂದದಿಂದಲೂ ತುಂಬಿದ ಮಹಿಮೆಯಿಂದಲೂ ಉಲ್ಲಾಸಪಡುತ್ತೇವೆ. ಇ.ಜಿ. ವೈಟ್ Councels for the Church P 358.

**ಚರ್ಚಿಸಬೇಕಾದ ಪ್ರಶ್ನೆಗಳು**

1. ಯೇಸುಕ್ರಿಸ್ತನ ಎರಡನೇ ಬರೋಣದಲ್ಲಿ ಅನ್ಯಕ್ರೈಸ್ತರು (ಎಲ್ಲರೂ ಅಲ್ಲ) ನಂಬಿಕೆ ಇಟ್ಟಿದ್ದಾರೆ. ಆದರೆ ಆತನ ಎರಡನೇ ಬರೋಣದ ಬಗ್ಗೆ ಅಡ್ವೆಂಟಿಸ್ಟರ ನಿರೀಕ್ಷೆ ಏಕೆ ವಿಶಿಷ್ಟವಾಗಿದೆ?

2. ಎರಡು ಮೀನುಗಳು ಈಜುತ್ತಿರುತ್ತವೆ ಆವಾಗ ಒಂದು ಮೀನು ಇನ್ನೊಂದನ್ನು "ಹೇಗಿದೆ ನೀರು?" ಎಂದು ಕೇಳುತ್ತದೆ; ಅದಕ್ಕೆ ಆ ಯೇಸು ನೀರು ಅಂದರೇನು?" ಎಂದು ಮರುಪ್ರಶ್ನೆ ಹಾಕುತ್ತದೆ. ಇಲ್ಲಿ ನಾವು ತಿಳಿಯಬೇಕಾದುದೇನೆಂದರೆ ನಾವು ಆ ಮೀನಿನಂತೆ ಯಾವಾಗಲೂ ಬಳಸುವ ವಸ್ತುಗಳ ಬಗ್ಗೆ ಅರಿವಿಲ್ಲದೇ ಇರುತ್ತೇವೆ. ಉದಾಹರಣೆಗೆ ನಾವು ಪಾಪದವರಲ್ಲಿ ಹುಟ್ಟಿದವರಾಗಿ, ಪಾಪದ ಜೀವನವನ್ನೇ ಜೀವಿಸಿ ಈ ಪಾಪಮಯ ಲೋಕದಲ್ಲಿದ್ದಾಗ್ಯೂ ಎಂಥಾ ಅದ್ಭುತವಾದ ನೂತನ ಜೀವನವನ್ನು ನೂತನ ಭೂಮ್ಯಾಕಾಶ ಮಂಡಲದಲ್ಲಿ ನಾವು ಜೀವಿಸುತ್ತೇವೆ ಎಂಬುದನ್ನು ಹೇಗೆ ಗ್ರಹಿಸಿಕೊಳ್ಳಬಹುದು?

3. ನಾವು ನೂತನ ಭೂಮಿಯಲ್ಲಿ ಹೇಗೆ ಬದುಕುತ್ತೇವೆ ಎಂಬ ಪ್ರಶ್ನೆಯೇ ಬರುವುದಿಲ್ಲ ಯಾಕೆಂಅರೆ ಅಲ್ಲಿ ಎಲ್ಲರೊಟ್ಟಿಗೆ ಐಕ್ಯತೆಯಿಂದಿರುತ್ತೇವೆ. ಆದರೆ ನಾವು ಮುಂದೆ ನಡೆಯಲಿರುವ ವಿಷಯಕ್ಕೆ ಸಂಬಂಧಿಸಿದಂತೆ ಸಿದ್ಧತೆ ಮಾಡಿಕೊಳ್ಳಲು ಈಗಾಗಲೇ ಏನು ಮಾಡಬಹುದು?

ಈವಾಗ ನಮ್ಮ ಪರಿಮಿತಿಗಳು ಏನೇ ಇದ್ದಾಗ್ಯೂ ನಾವು ಮುಂಡಿ ಹೇಗಿರುತ್ತೇವೆ ಎಂಬುದನ್ನು ಮನಸ್ಸಿನಲ್ಲಿ ಮೂಡಿಸಿಕೊಳ್ಳಲು ಪ್ರಯತ್ನಿಸಬೇಕು ಏಕೆ?

**ಸಾರಾಂಶ** : ಸತ್ಯವೇದವು ಈ ಭೂಮಿಯು ಮರುಸೃಷ್ಟಿಯಾಗುವ ಮತ್ತು ಪಾಪದ ವಿನಾಶಕರ ಪರಿಣಾಮಗಳನ್ನು ಶಾಶ್ವತವಾಗಿ ಅಳಿಸಿ ಬಿಡುವ ಕಾಲವನ್ನು ಕುರಿತು ಭರವಸೆಯಿಂದ ಮಾತಾಡುತ್ತದೆ. ಅಂತಿಮವಾಗಿ ಮಾನವತೆಯು ತನ್ನ ಮೂಲ ಉದ್ದೇಶಕ್ಕೆ ಹಿಂದಿರುಗಿಸಲ್ಪಡುತ್ತದೆ (ಮರುಸ್ಥಾಪನೆ) ಎಲ್ಲರೂ ಸಾಮರಸ್ಯದಿಂದ ಜೀವಿಸುತ್ತಾರೆ. ಕ್ರಿಸ್ತನಲ್ಲಿರುವ ನಮ್ಮ ಈಗಿನ ಆಧ್ಯಾತ್ಮಿಕ ಏಕತೆ ಪೂರ್ಣವಾಗಿ ಸಿದ್ಧಿಗೆ ಬಂದಿಲ್ಲದಿದ್ದರೂ ಮುಂದೆ ಅದು ಜೀವಂತವಾದ ಮತ್ತು ಶಾಶ್ವತವಾದ ವಾಸ್ತವವಾಗಿರುತ್ತದೆ (ನಿಜವಾಗಿರುತ್ತದೆ).

* * * * * *